ಓ ಎಸ್ ನಂಃ 215/2016

ಪಿ. ಡಬ್ಲ್ಯೂ ಃ 1

ದಿಃ 10.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎನ್ ಎಂ ವಕೀಲರಿಂದ ಃ

ನಮ್ಮ ತಾತ ನರಸಿಂಹಯ್ಯ ಇವರ ಊರು ಬೀರವಾರ ಇರುತ್ತದೆ. ನಮ್ಮ ತಾತ ನರಸಿಂಹಯ್ಯ ಇವರಿಗೆ ಕದರಯ್ಯ ಎಂಬ ತಮ್ಮನಿದ್ದರು ಎಂದರೆ ಸರಿ. ನಮ್ಮ ತಾತನಿಗೆ ಬೀರವಾರಗ್ರಾಮದ ಸ.ನಂ. 1 ರಲ್ಲಿ 3 ಎಕರೆ ಜಮೀನಿತ್ತು ಎಂದರೆ ಸರಿ. ಅದು ನಮ್ಮ ತಾತನ ಪಿತ್ರಾರ್ಜಿತ ಸ್ವತ್ತಾಗಿತ್ತು. ನಮ್ಮ ತಾತ ನರಸಿಂಹಯ್ಯನಿಗೆ ಕದರಯ್ಯ, ತಾತಗಯ್ಯ ಮತ್ತು ಗಂಗಯ್ಯ ಎಂಬ ಸಹೋದರರಿದ್ದರು. ಸ.ನಂ. 1 ರಲ್ಲಿ 1 ಎಕರೆ 20 ಗುಂಟೆ ನಮ್ಮ ತಾತನ ಹೆಸರಿನಲ್ಲಿತ್ತು ಮತ್ತು 1 ಎಕರೆ 20 ಗುಂಟೆ ಕದರಯ್ಯ ಇವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸ.ನಂ. 1 ರಲ್ಲಿ ನಮ್ಮ ತಾತನ ಹೆಸರಿನಲ್ಲಿದ್ದ ಜಮೀನು ಈಗ ಇದೆ. ದಿನಾಂಕ ಃ 16.04.1963 ರಂದು 1 ಎಕರೆ 20 ಗುಂಟೆಯನ್ನು ಕದರಯ್ಯ ಇವರು ಗಂಗಯ್ಯ ರವರ ಮಗ ನಂಜುಂಡಪ್ಪ ಇವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಕದರಯ್ಯ ಇವರ ತಂದೆಯ ಹೆಸರು ಅಪ್ಪಯ್ಯ ಎಂದರೆ ಸರಿಯಲ್ಲ. ಅವರು ಹೆಸರು ನರಸಿಂಹಯ್ಯ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಕದರಯ್ಯ ಇವರ ಹೆಸರಿನಲ್ಲಿದ್ದ ಅಧಾರ್ ಕಾರ್ಡ್ , ರೇಷನ್ ಕಾರ್ಡ್ ಮತ್ತು ಇತರೇ ದಾಖಲೆಗಳು ಇರುವುದಿಲ್ಲ. ಕದರಯ್ಯ ರವರ ವಾರಸುದಾರರು ಬೀರುವಾರದಲ್ಲಿ ಇರುತ್ತಾರೆ. ದಾವಾ ಸ್ವತ್ತು ಮೂಲತಃ 1 ನೆ ಪ್ರತಿವಾದಿಯ ತಂದೆಯ ಸ್ವತ್ತು ಎಂದರೆ ಸರಿ. ರಂಗಯ್ಯ ಎಂದರೆ ರಂಗಸ್ವಾಮಿ ರವರ ತಂದೆ ಎಂದರೆ ಸರಿ. ಅದನ್ನು ನಮ್ಮ ತಾತ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನರಸಿಂಹಯ್ಯ ಬಿನ್ ನರಸಿಂಹಯ್ಯ ಅಂದರೆ ನಮ್ಮ ತಾತ 1999 ರಲ್ಲಿ ತೀರಿಕೊಂಡಿದ್ದಾರೆ.

ನಮ್ಮ ತಾತನ ಸಹೋದರರು ಬೇರೆ ಬೇರೆಯಾಗಿದ್ದರು, ಆದರೆ ಯಾವಾಗ ಬೇರೆಯಾಗಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡು ಅವರು ಮತ್ತು ಅವರ ಸಹೋದರರ ಮದ್ಯೆ ಭಾಗ ಆಗಿತ್ತು. ಭಾಗವಾದ ಬಗ್ಗೆ ಯಾವುದೆ ದಾಖಲೆಗಳು ನನ್ನ ಬಳಿ

ಇಲ್ಲ. ಯಾವ ಯಾವ ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ನರಸಿಂಹಯ್ಯ ಇವರು 25 ಸಾವಿರ ರೂ.ಗಳನ್ನು ಸಾಲವಾಗಿ ಪಡೆದಾಗ ನಾನು ಇರಲಿಲ್ಲ, ನನ್ನ ತಂದೆ ಹೇಳಿದ್ದರು. ಸಾಲವನ್ನು ಯಾವ ತಾರೀಖು ಮತ್ತು ಯಾವ ತಿಂಗಳು ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಹಣ ವಾಪಸ್ ಕೊಟ್ಟಾಗಲೂ ಸಹ ನಾನು ಇರಲಿಲ್ಲ, ಅದನ್ನು ನಮ್ಮ ತಂದೆ 2016 ರಲ್ಲಿ ನನಗೆ ಹೇಳಿದ್ದರು. ನಮ್ಮ ತಂದೆಯು ರಂಗಸ್ವಾಮಿಯು ಖಾಲಿ ಪತ್ರದಲ್ಲಿ ಸಹಿ ಮಾಡಿಸಿಕೊಂಡಿದ್ದು, ಅದನ್ನು ಅವರು ವಾಪಸ್ ಕೊಡುತ್ತಿಲ್ಲ ಎಂದು ನ್ಯಾಯಾಲಯದಲ್ಲಿ ಕೇಸ್ ಮಾಡಿದ್ದಾರೆ. ಠಾಣೆಯಲ್ಲಿ ಯಾವುದೆ ದೂರು ಕೊಟ್ಟಿಲ್ಲ. ಇದೇ ನ್ಯಾಯಾಲಯದಲ್ಲಿ ನಾವು ಖಾಲಿ ಪತ್ರವನ್ನು ಕೇಳಿದ್ದೇವೆ, ಬೇರೆ ಪ್ರತ್ಯೇಕ ಕೇಸ್ ಹಾಕಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಕ್ರಯಪತ್ರವಾಗಿದ್ದು 2015 ರಲ್ಲಿ ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ಮೋಸದಿಂದ ಕ್ರಯಪತ್ರ ಮಾಡಿಕೊಂಡಿದ್ದಾರೆ ಎಂದು ದೂರು ಕೊಟ್ಟಿದ್ದೇನೆ. 2015 ರಲ್ಲಿ ಕುದೂರು ಠಾಣೆಯಲ್ಲಿ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. **2 ಪೋಟೋಗಳನ್ನು ಸಾಕ್ಷಿಗೆ ತೋರಿಸಿದಾಗ ಅದರಲ್ಲಿರುವ ಮನೆಗಳು ದಾವಾ ಸ.ನಂ. ನಲ್ಲಿ ಇರುತ್ತವೆ ಎಂದರೆ ಸರಿ. ಅವುಗಳನ್ನು ನಾವು ಕಟ್ಟಿಕೊಂಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ ಸದರಿ ಪೋಟೋಗಳನ್ನು ನಿ ಡಿ 1 ಮತ್ತು ನಿ ಡಿ 2 ಎಂದು, ಸಿ ಡಿ ಕೊಡುವ ನಿಬಂಧದ ಮೇಲೆ ಗುರುತಿಸಲಾಗಿದೆ.** ಅದರಲ್ಲಿರುವ ವ್ಯಕ್ತಿ 2 ನೆ ಪ್ರತಿವಾದಿ ಎಂದರೆ ಸಾಕ್ಷಿ ಸರಿಯಾಗಿ ಕಾಣಿಸುವುದಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನಲ್ಲಿ ಮುನೇಶ್ವರ ದೇವಸ್ಥಾನ ಇದೆ ಎಂದರೆ ಸರಿ. **ಆ ಬಗ್ಗೆ ಒಂದು ಪೋಟೋವನ್ನು ತೋರಿಸಿದಾಗ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿ ಡಿ 3 ಎಂದು ಗುರುತಿಸಲಾಯಿತು.** ಅದರಲ್ಲಿ ಒಂದು ನೀರಿನ ಸಂಪ್ ಮತ್ತು ಶೆಡ್ ಇದೆ ಎಂದರೆ ಸರಿ. ಅವುಗಳನ್ನು ನಾವೇ ಕಟ್ಟಿಸಿದ್ದೇವೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ **ಸದರಿ ಪೋಟೋಗಳನ್ನು ನಿ ಡಿ 4 ಮತ್ತು ನಿ ಡಿ 5 ಎಂದು ಗುರುತಿಸಲಾಯಿತು.** ಆ ಶೆಡ್, ಮನೆ ಮತ್ತು ನೀರಿನ

ಸಂಪ್ ನ್ನು 2005 ರಲ್ಲಿ ಕಟ್ಟಿಸಿದ್ದೇವೆ. ಅವುಗಳನ್ನು ಕಟ್ಟಿಸಲು ಸುಮಾರು 25 ಲಕ್ಷ ಹಣ ಖರ್ಚಾಗಿದೆ. ಅವುಗಳನ್ನು ಕಟ್ಟಿಸಲು ಯಾವುದೆ ಲೈಸೆನ್ಸ ತೆಗೆದುಕೊಂಡಿಲ್ಲ. ನನ್ನ ವಾದಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಮುನೇಶ್ವರ ದೇವಸ್ಥಾನ ಇದೆ, ಒಂದು ಮನೆ ಇದೆ, ಶೆಡ್ ಇದೆ ಮತ್ತು ನೀರಿನ ಸಂಪ್ ಇದೆ ಎಂದು ಬರೆಯಿಸಿದ್ದೇನೆ. ಇವುಗಳನ್ನು ನಾವು ಕಟ್ಟಿಸಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ವಾದಪತ್ರದಲ್ಲಿ ಹೇಳಿಲ್ಲ ಮತ್ತು ಲೈಸೆನ್ಸ ಪಡೆದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.